ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು

**ಸಿ.ಸಿ. 320/2021**

| | | |
|---|---|---|
| ಸಾಕ್ಷಿಯ ಹೆಸರು | :- | ಹೆಚ್ ಆನಂದ ಕುಮಾರ |
| ತಂದೆ/ ಗಂಡನ ಹೆಸರು | :- | ಹೊನ್ನಯ್ಯ |
| ವಯಸ್ಸು | :- | 52 ವರ್ಷ |
| ಉದ್ಯೋಗ | :- | ಪಿಎಸ್ ಐ |
| ವಾಸಸ್ಥಳ | :- | ಮಂಡ್ಯ |

(ಸಾಕ್ಷಿಗೆ ದಿನಾಂಕಃ 08-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು)

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ನಾನು23-02-2019 ರಿಂದ 10-11-2020 ರವರೆಗೆ ಬೆಸಗರಹಳ್ಳಿ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ 30-07-2020 ರಂದು ಬೆಳಿಗ್ಗೆ 10-30 ರ ಸಮಯದಲ್ಲಿ ನಾನು ಠಾಣಾ ಪ್ರಭಾರ ಕರ್ತವ್ಯದಲ್ಲಿದ್ದಾಗ ಬಂದ ಮಾಹಿತಿ ಯಂತೆ ಕೆಎ-45-7450 ರ ಟಾಟಾ ಏಸ್ ಗೂಡ್ಸ್ ವಾಹನದಲ್ಲಿ ಒಂದು ಹಸುವನ್ನು ಕಸಾಯಿ ಖಾನೆಗೆ ಸಾಗಿಸುತ್ತಿದ್ದಾರೆಂದು ಮಾಹಿತಿ ಬಂದ ಮೇರೆಗೆ ಕೂಡಲೇ ಸಿಬ್ಬಂದಿಗಳಾದ ಚಾಸಾ-2 ಮತ್ತು 3 ರೊಂದಿಗೆ ಇಲಾಖಾ ಜೀಪ ನಂಃ ಕೆಎ-11-ಜಿ-383 ರಲ್ಲಿ ನಾನೇ ಚಾಲನೆ ಮಾಡಿಕೊಂಡು ಮಂಡ್ಯ ಮತ್ತು ಬೆಸಗರಹಳ್ಳಿ ಮುಖ್ಯ ರಸ್ತೆ ಮುಸ್ಲಿಂ ಮಸಣದ ಮುಂಭಾಗ ಸದರಿ ಮೇಲೆ ಹೇಳಿದ ವಾಹನವನ್ನು ತಡೆದು ನಿಲ್ಲಿಸಿ ವಾಹನದ ಚಾಲಕನನ್ನು ವಿಚಾರಣೆ ಮಾಡಲಾಗಿ ಆತ ಯಾವುದೇ ಪರವಾನಿಗೆ ಪಡೆದಿರಲಿಲ್ಲ ಹೆಸರು ಮತ್ತು ವಿಳಾಸ ಕೇಳಲಾಗಿ ಆತ ಖಾದರ್ ಆಲಿ ಬಿನ್ ಅಮೀರ್ , ಮದ್ದೂರು ಎಂದು ತಿಳಿಸಿದ್ದು, ನಂತರ ವಾಹನವನ್ನು ಪರಿಶೀಲನೆ ಮಾಡಲಾಗಿ ಕಪ್ಪು ಮತ್ತು ಬಿಳಿ ಮಿಶ್ರಿತ ಇಲಾತಿ ಹಸು ಕಂಡುಬಂದಿದ್ದು ಅದನ್ನು ಪಂಚರಾದ ಅಲ್ಲಿಯೇ ಇದ್ದ ಚಾಸಾ-4 ಮತ್ತು 5 ರವರ ಸಮಕ್ಷಮ ಬೆಳಿಗ್ಗೆ 11-00 ಗಂಟೆಯಿಂದ 12-00 ಗಂಟೆಯವರೆಗೆ ಅಮಾನತ್ತು ಮಹಜರ್ ಮೂಲಕ ಸದರಿ ವಾಹನ ಮತ್ತು ಹಸುವನ್ನು

ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ಅಮಾನತ್ತು ಪಂಚನಾಮೆ ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ಮಹಜರ್ ವೇಳೆಯಲ್ಲಿ ಈಗ ನೋಡುತ್ತಿರುವ ಭಾವಚಿತ್ರವನ್ನು ತೆಗೆಯಲಾಯಿತ್ತು ಸದರಿ ಭಾವಚಿತ್ರವನ್ನು ನಿಪಿ-5 ರಿಂದ 8 ಎಂದು ಗುರುತಿಸಲಾಯಿತು. ನಂತರ ಠಾಣಗೆ 12-30 ಕ್ಕೆ ವಾಪಸಾಗಿ ಸ್ವಯಂ ವರದಿಯನ್ನು ದಾಖಲಿಸಿ ಸದರಿ ಸ್ವಯಂ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2 ಎಂದು, ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಂತರ ಎಫ್ ಐ ಆರ್ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ .ಈಗ ನಾನು ದಾಖಲಿಸಿದ್ದ ಪ್ರವವರದಿಯನ್ನು ನಿಪಿ- 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿದ ಹಸುವನ್ನು ಗೋ ಸಂರಕ್ಷಣಾ ಶಾಲೆ, ಪಿಂಜರ ಪೋಲ್, ಮೈಸೂರು ರವರಲ್ಲಿ ಕಳುಹಿಸಲು ಚಾಸಾ-7 ರವರನ್ನು ನೇಮಿಸಿರುತ್ತೇನೆ. ಅದರೊಂದಿಗೆ ಸದರಿಯವರಿಗೆ ನಿವೇದನೆಯನ್ನು ಕಳುಹಿಸಿದ್ದೇನೆ ಅದನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿಯವರು ಸ್ವೀಕರಿಸಿದ ಸ್ವೀಕೃತಿಯನ್ನು ನಿಪಿ-4(ಬಿ)ಎಂದು ಗುರುತಿಸಲಾಯಿತು ದಿಃ 14-09-2021 ರಂದು ಸದರಿ ಗೋ ಶಾಲೆಯವರು ಹಸುವನ್ನು ಸ್ವೀಕರಿಸಿದ ಬಗ್ಗೆ ನೀಡಿದ ಸ್ವೀಕೃತಿಯನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಸದರಿ ಸ್ವೀಕೃತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿದ ವಾಹನವನ್ನು ನ್ಯಾಯಾಲಯದ ಆದೇಶದ ಮೇರೆಗೆ ವಾಹನದ ಮಾಲೀಕರಿಗೆ ಸೂಕ್ತ ದಾಖಲೆ ಪಡೆದು ನೀಡಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ- 9 ರವರಿಗೆ ವರ್ಗಾಯಿಸಿರುತ್ತೇನೆ. ಈಗ ನ್ಯಾಯಾಲಯದ ಮುಂದೆಯಿರುವ ಆರೋಪಿಯೇ ಆ ದಿನ ಆರೋಪಿತ ಅಪರಾಧ ಮಾಡಿದವರಾಗಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರವರಿಂದಃ**

ಠಾಣೆ ಮತ್ತು ಕೃತ್ಯ ನಡೆದ ಸ್ಥಳದ ನಡುವೆ ಸುಮಾರು 2-3 ಕಿಲೋಮೀಟರ್ ಅಂತರವಿದೆ ಮಾಹಿತಿ ಕೊಟ್ಟ ಕೂಡಲೇ ಠಾಣೆಯಿಂದ ಹೊರಟಿರುತ್ತೇವೆ. ನಾವು ಠಾಣೆಯಿಂದ ಹೊರಡುವಾಗ ಯಾವಾ ಕಾರಣಕ್ಕೆ ಹೋಗುತ್ತಿದ್ದೆವೆ ಎಂದು ಕೇಸ್ ಡೈರಿಯಲ್ಲಿ ನಮೂದಿಸಿರುತ್ತೇವೆ. ಸದರಿ ಕೇಸ್ ಡೈರಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ಹಸು ವಾಹನದಲ್ಲಿದ್ದಾಗಲೇ ಭಾವಚಿತ್ರ ತೆಗೆಯಲು ತೊಂದರೆ ಇರಲಿಲ್ಲ ಎಂದರೆ ಸರಿ. ಪಂಚರಿಗೆ ನೋಟಿಸ್ ನೀಡಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅಲ್ಲಿಯೇ ಇದ್ದ ಪಂಚರನ್ನು ಬರಮಾಡಿಕೊಂಡೆವು ಎನ್ನುತ್ತಾರೆ. ಆರೋಪಿಯು ಯಾವುದೇ ಹಸುವನ್ನು ಕಸಾಯಿ ಖಾನೆಗೆ ಕರೆದ್ಯೊಯ್ಯುತ್ತಿಲ್ಲದಿದ್ದರೂ ಠಾಣಾ ಅಂಕಿಅಂಶಕ್ಕಾಗಿ ಯಾವುದೇ ಹಸುವನ್ನು ಸೇರಿಸಿ ಆರೋಪಿ ವಿರುದ್ಧ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಸಾಧ್ಯವಾದರೇ ಆರೋಪಿಗೆ ಶಿಕ್ಷೆ ಕೊಡಿಸಬೇಕೆಂದು ಸುಳ್ಳು ಎಫ್ ಐ ಆರ್ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಒ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು